

ಸಿದ್ದರಾಮಯ್ಯ, ದೇವೇಗೌಡ, ಜಯಲಲಿತಾ ಚಿತ್ರಗಳೂ ಕಾಣಿಸುತ್ತವೆ. ಜೊತೆಗೇ, ತಮಿಳುನಾಡಿನ ಎಐಎಡಿಎಂಕೆ, ಡಿಎಂಕೆ ಪಕ್ಷಗಳ ಬಾವುಟಗಳು ಹಾಗೂ ಆರ್‌ಪಿಐ, ಸಿಪಿಎಂ, ಸಿಪಿಐ ಬಾವುಟಗಳೂ ಚಿಹ್ನೆಗಳೂ ಅನಾಯಾಸವಾಗಿ ಕಾಣಿಸುತ್ತವೆ. ಇದು ಈ ನಗರದ ಕಾಸ್ಮೊಪೊಲಿಟನ್ ಸಂಸ್ಕೃತಿಯ ಬಿಂಬ. ಕರ್ನಾಟಕದಲ್ಲಿ ಕಾಸ್ಮೊಪೊಲಿಟನ್ ಸಂಸ್ಕೃತಿ ಮೊದಲು ಜೀವತಳೆದಿದ್ದು ಇಲ್ಲಿ.

ಬ್ರಿಟಿಷರ ಶಿಷ್ಟಾಚಾರಗಳು, ಕ್ಲಬ್ ಸಂಸ್ಕೃತಿ, ಅವರ ಆಟೋಟಗಳು, ಕ್ರಿಸ್ಮಸ್, ಹೊಸ ವರ್ಷದ ಸಂದರ್ಭದ ಸಂಭ್ರಮ ಇಲ್ಲಿನ ಸಂಸ್ಕೃತಿಯ ಭಾಗ. ಇಲ್ಲಿ ಇರುವ ಚಾಪೆಲ್ ಮತ್ತು ಚರ್ಚುಗಳ ಒಟ್ಟು ಸಂಖ್ಯೆ 120ರಷ್ಟು. ಇಷ್ಟೆಲ್ಲವನ್ನೂ ದಶಕಗಳ ಹಿಂದೆಯೇ ತನ್ನದಾಗಿಸಿಕೊಂಡ ಕೆಜಿಎಫ್‌ನಲ್ಲಿ ಇಂದಿಗೂ ಬಯಲು ಬಹಿರ್ದೆಸೆ ಕೂಡ ಇದೆ ಎಂಬುದೊಂದು ವಿರೋಧಾಭಾಸ.

ಇಲ್ಲಿನ ಬಂಗಲೆಗಳು, ಆಸ್ಪತ್ರೆಗಳು, ಚರ್ಚು, ಕೈಗಾರಿಕಾ ಕಟ್ಟಡಗಳನ್ನು ನಿರ್ಮಿಸಿದ್ದು ವಿಕ್ಟೋರಿಯನ್ ಹಾಗೂ ಆಂಗ್ಲೊಸ್ಯಾಕ್ಸನ್ ಶೈಲಿಯಲ್ಲಿ. ಗೋಥಿಕ್ ವಿನ್ಯಾಸದ ಕಟ್ಟಡಗಳೂ ಇಲ್ಲಿವೆ. 'ಮೇ ಟ್ರೀ' ಅಥವಾ ಗುಲ್‌ಮೊಹರ್ ಮರಗಳು ದೇಶದಾದ್ಯಂತ ಹರಡಿಕೊಂಡಿದ್ದು ಕೆಜಿಎಫ್ ಮೂಲಕ ಎಂಬ ಮಾತಿದೆ.

ಇಲ್ಲಿನವರಿಗೆ ಇಂಗ್ಲಿಷ್ ಕಲಿಸಿದ ಬ್ರಿಟಿಷರು, ತಾವು ಇಲ್ಲಿಂದ ಹೊರಡುವ ಮೊದಲು ಒಂದು ಬಳುವಳಿ ಕೊಟ್ಟು ಹೋದರು. ಅವರಿಂದ ಚೆನ್ನಾಗಿ ಇಂಗ್ಲಿಷ್ ಕಲಿತುಕೊಂಡ ಒಂದು ತಲೆಮಾರಿನ ಯುವತಿಯರು ಶಾಲೆಗಳಲ್ಲಿ ಇಂಗ್ಲಿಷ್ ಶಿಕ್ಷಕಿಯರಾಗಿ ಕೆಲಸಕ್ಕೆ ಸೇರಿದರು.

ಅವರು ಕಲಿತಿರುವ ಇಂಗ್ಲಿಷ್ ಉತ್ತಮ ಮಟ್ಟದ್ದು ಎಂಬ ನಂಬಿಕೆ ಜನರಲ್ಲಿ ಇದೆ. ಹಾಗಾಗಿ 'ಇಂಗ್ಲಿಷ್ ಶಾಲೆಗಳ ಜಾಹೀರಾತಿನಲ್ಲಿ, ನಮ್ಮಲ್ಲಿ ಕೆಜಿಎಫ್ ಇಂಗ್ಲಿಷ್ ಟೀಚರ್ ಲಭ್ಯ ಎನ್ನುವ ಒಕ್ಕಣೆ ಇರುತ್ತದೆ' ಎಂದು ಮುನಿರತ್ನಂ ಹೇಳುತ್ತಾರೆ.

## ಸಯನೈಡ್ ದಿಬ್ಬಗಳ ಕಥೆ

ಚಿನ್ನದ ಅಂಶ ಇರಿಸಿಕೊಂಡಿದ್ದ ಶಿಲೆಗಳನ್ನು ಪುಡಿ ಮಾಡಿ, ಅವುಗಳನ್ನು ಕೆಜಿಎಫ್‌ನ ಅಲ್ಲಲ್ಲಿ ಗುಪ್ಪೆ ಹಾಕಲಾಗಿದೆ. ಅವು ಗುಡ್ಡಗಳಷ್ಟು ಬೃಹದಾಕಾರ ಪಡೆದಿವೆ. ನೋಡಲು ಕಲಾತ್ಮಕವಾಗಿಯೂ ಇವೆ! ಎಷ್ಟು ಕಲಾತ್ಮಕ ಅಂದರೆ, ಸಿನಿಮಾ ಚಿತ್ರೀಕರಣಗಳಿಗೆ ಬಳಕೆ ಮಾಡುವಷ್ಟು. ಈ ವಾರ ತೆರೆಗೆ ಬರುತ್ತಿರುವ ಕನ್ನಡದ 'ಕೆಜಿಎಫ್' ಚಿತ್ರೀಕರಣ ನಡೆದಿದ್ದು ಕೂಡ ಇಂಥದ್ದೇ ಒಂದು ದಿಬ್ಬದ ಮೇಲೆ.

ಇಂತಹ ದಿಬ್ಬಗಳನ್ನು ಸ್ಥಳೀಯವಾಗಿ ಸಯನೈಡ್ ಡಂಪ್ಸ್ ಎಂದು ಕರೆಯುತ್ತಾರೆ. ಕೆಜಿಎಫ್‌ನಲ್ಲಿ ಇಂತಹ ಹದಿಮೂರು ದಿಬ್ಬಗಳು ಇವೆ. 'ಸಂಸ್ಕರಿಸಿದ ನಂತರ ಸುರಿದಿರುವ ಈ ಉಳಿಕೆಯಲ್ಲಿ ಕೂಡ ಪ್ರತಿ ಟನ್‌ಗೆ 0.5ರಿಂದ 0.8ಗ್ರಾಮ್‌ನಷ್ಟು ಚಿನ್ನ ಇದೆ' ಎನ್ನುತ್ತಾರೆ ತಜ್ಞರು. ಸಯನೈಡ್ ಡಂಪ್‌ಗಳನ್ನು ಪುನಃ ಸಂಸ್ಕರಿಸಿ, 20ರಿಂದ 25 ಟನ್ ಚಿನ್ನ ಪಡೆಯಬಹುದು ಎಂಬ ಅಂದಾಜು ಕೂಡ ಇದೆ.

ಈ ಡಂಪ್‌ಗಳು ಈಗ ಸ್ಥಳೀಯ ಪೊಲೀಸರಿಗೆ ಶೂಟಿಂಗ್ ರೇಂಜ್ ಆಗಿ ಉಪಯೋಗಕ್ಕೆ ಬರುತ್ತಿವೆ. ಆದರೆ, ಜನರ ಪಾಲಿಗೆ ಇವು ಆಸ್ತಮಾ ತೊಂದರೆಗೆ ಕಾರಣವಾಗುತ್ತಿವೆ.

ಕೆಲವು ದಿಬ್ಬಗಳ ಮೇಲೆ ಒಂದು ಹುಲ್ಲುಕಡ್ಡಿ ಕೂಡ ಬೆಳೆದಿಲ್ಲ. ಆ ದಿಬ್ಬಗಳು ಅತ್ಯಂತ ನುಣ್ಣಗೆ ಪುಡಿಮಾಡಿದ ಅದಿರಿನ ಉಳಿಕೆಗಳು. ಗಾಳಿ ಜೋರಾಗಿ ಬೀಸಿದ ತಕ್ಷಣ ಆ ಪುಡಿ ಊರಿನ ತುಂಬೆಲ್ಲ ಹರಡುತ್ತದೆ. ಅದು ಆಸ್ತಮಾಕ್ಕೆ ಕಾರಣವಾಗುತ್ತಿದೆ. ಇದನ್ನು ಕಂಡ ಸ್ಥಳೀಯ ನ್ಯಾಯಾಧೀಶರೊಬ್ಬರು, ದಿಬ್ಬಗಳ ಮೇಲೆ ಹಸಿರು ಹೊದಿಕೆ ನಿರ್ಮಾಣಕ್ಕೆ ಆದೇಶ ಹೊರಡಿಸಿದ್ದಾರೆ. ಅದರ ಪರಿಣಾಮವಾಗಿ ದಿಬ್ಬಗಳ ಮೇಲೆ ಈಗ ಅಂದಾಜು ಒಂದು ಲಕ್ಷ ಸಸಿಗಳನ್ನು ನೆಡಲಾಗಿದೆ. ತೀರಾ ಈಚೆಗೆ ಒಂದು ದಿಬ್ಬದ ಮೇಲೆ ವನಮಹೋತ್ಸವ ಕಾರ್ಯಕ್ರಮ ಕೂಡ ನಡೆದಿದೆ. ತಮ್ಮ ಆರೋಗ್ಯದ ರಕ್ಷಣೆಗಾಗಿ ಒಂದು ಉಪಕ್ರಮ ಇದು ಎಂದು ಜನ ಖುಷಿಪಟ್ಟಿದ್ದೂ ಇದೆ.

### ಆಲ್ ಸೋಲ್ಸ್ ಡೇ!

ಮೃತಪಟ್ಟ ಪೂರ್ವಿಕರಿಗೆ ಗೌರವ ಸಲ್ಲಿಸುವ ವಿಶಿಷ್ಟ ಆಚರಣೆಯೊಂದು ಇಲ್ಲಿದೆ. ಅದನ್ನು 'ಆಲ್ ಸೋಲ್ಸ್ ಡೇ' ಎಂದು ಕರೆಯಲಾಗುತ್ತದೆ. ಪ್ರತಿ ವರ್ಷ ನವೆಂಬರ್ 2ರಂದು ಹಿಂದೂಗಳು ಮತ್ತು ಕ್ರೈಸ್ತರು ಆಚರಿಸುತ್ತಾರೆ.

ಅಂದು ಸ್ಮಶಾನಗಳನ್ನು ಹೂವುಗಳಿಂದ ಸಿಂಗರಿಸುತ್ತಾರೆ. ಸಮಾಧಿಗಳಿಗೆ ಸುಣ್ಣಬಣ್ಣ ಬಳಿದು ಅಂದಗಾಣಿಸುತ್ತಾರೆ. ಕುಟುಂಬದವರು ತಮಗೆ ಅನುಕೂಲ ಆದ ಸಮಯ ನೋಡಿಕೊಂಡು ಪೂಜೆ, ಪ್ರಾರ್ಥನೆ ಸಲ್ಲಿಸುತ್ತಾರೆ. ಈ ಸಮಯದಲ್ಲಿ ಕೆಜಿಎಫ್‌ನ ಅಷ್ಟೂ ಸ್ಮಶಾನಗಳು ಜಾತ್ರೆಯ ರೂಪ ಪಡೆಯುತ್ತವೆ!